ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಮಕ್ಕಳು ತುಂಬಾ ಸಂಕಷ್ಟದಲ್ಲಿದ್ದಾರೆ. ಬೇರೆ ಕಟ್ಟಡಗಳಲ್ಲಿ ತೊಂದರೆಯಿರುವ ಕಾರಣ ಈ ಸಾಲಿನಲ್ಲೇ ಕಟ್ಟಡವನ್ನು ಪ್ರಾರಂಭಿಸುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಆದ್ಯತೆಯ ಮೇಲೆ ಕೆಲಸವನ್ನು ಪ್ರಾರಂಭ ಮಾಡುವಂತೆ ಈ ವಿಷಯವನ್ನು ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ವೈ.ಎಸ್.ವಿ. ದತ್ತಾ ರವರು ಸದನದಲ್ಲಿ ಹಾಜರಿಲ್ಲ, ಅಪ್ಪಾಜಿ ಸಿ.ಎಸ್. ನಾಡಗೌಡರವರು ಹಾಜರಿಲ್ಲ.

11. ವಿಷಯ: ಹಾನಗಲ್ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಹಾಳಾಗಿರುವ ರಸ್ತೆಗಳಿಗೆ ಸುಧಾರಣೆಗಾಗಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್ (ಹಾನಗಲ್):– ಮಾನ್ಯ ಅಧ್ಯಕ್ಷರೆ, ಹಾನಗಲ್ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಬೀಳುತ್ತಿರುವ ಕಾರಣ ರಸ್ತೆಗಳು ತುಂಬಾ ಹಾಳಾಗಿದ್ದು, ಆ ರಸ್ತೆಗಳ ಸುಧಾರಣೆಗಾಗಿ ಈಗ ಕೊಡುತ್ತಿರುವ ಅನುದಾನ ಎಳ್ಳಷ್ಟು ಸಾಲದು, 3054 ರಲ್ಲಿ 47.79 ಲಕ್ಷ ರೂ. ಗಳ ಅನುದಾನ ಕೊಟ್ಟಿದ್ದಾರೆ. ಯೋಜನೇತರದಲ್ಲಿ 59.37 ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಈ ಹಣ ರಸ್ತೆಗಳ ರಿಪೇರಿಗೆ ಸಾಕಾಗುವುದಿಲ್ಲ. ಸುಮಾರು 369.77 ಕಿ.ಮೀ. ಜಲ್ಲಿ ರಸ್ತೆ, 152.72 ಕಿ.ಮೀ..... ಈ ರಸ್ತೆಗಳ ರಿಪೇರಿಗೆ ಈ ಹಣ ಸಾಕಾಗುವುದಿಲ್ಲ. ಆದ್ದರಿಂದ ವಿಶೇಷವಾದ ಹಣವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಒಟ್ಟು ಉದ್ದ 602.73 ಕಿ.ಮೀ. ಗ್ರಾಮೀಣ ರಸ್ತೆಗಳಿದ್ದು, ಈ ಪೈಕಿ ಡಾಂಬರು ರಸ್ತೆ ಉದ್ದ 374.24 ಕಿ.ಮೀ., ಜಲ್ಲಿ ರಸ್ತೆ ಉದ್ದ 69.77 ಕಿ.ಮೀ. ಹಾಗೂ ಮಣ್ಣಿನ ರಸ್ತೆಗಳ ಉದ್ದ 158.72 ಕಿ.ಮೀ. ಗಳಿರುತ್ತವೆ.

ಪ್ರತಿ ವರ್ಷ ರಾಜ್ಯದ ಜಿಲ್ಲೆಗಳಲ್ಲಿನ ಗ್ರಾಮೀಣ ರಸ್ತೆಗಳ ದುರಸ್ತಿ/ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ವಿವಿಧ ಲೆಕ್ಕ ಶೀರ್ಷಿಕೆ/ಕಾರ್ಯಕ್ರಮಗಳಡಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ.

ಅದರಂತೆ ಜಿಲ್ಲಾ ಪಂಚಾಯತಿಗಳಿಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಜಿ.ಪಂ. ಗಳಲ್ಲಿ ಕ್ರಿಯಾ ಯೋಜನೆ ರೂಪಿಸಿ ರಸ್ತೆ ನಿರ್ವಹಣೆ/ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ಪ್ರಸ್ತುತ 2015–16ನೇ ಸಾಲಿನಲ್ಲಿ ಹಾನಗಲ್ ತಾಲ್ಲೂಕಿನ ರಸ್ತೆಗಳ ಸುಧಾರಣೆಗಾಗಿ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃಧಿ ಯೋಜನೆ ಲೆಕ್ಕ ಶೀರ್ಷಿಕೆ–3054 ರಡಿ ₹ 47.79 ಲಕ್ಷ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆ–3054ರ ಟಾಸ್ಕ್ ಫೋರ್ಸ್ ಕಾರ್ಯಕ್ರಮದಡಿ ₹ 59.32 ಲಕ್ಷ ಹಂಚಿಕೆಯಾಗಿರುತ್ತದೆ. ಹಂಚಿಕೆಯಾದ ಅನುದಾನದಂತೆ ಜಿ.ಪಂ. ವತಿಯಿಂದ ಸದರಿ ತಾಲ್ಲೂಕಿನ ರಸ್ತೆಗಳನ್ನು ನಿರ್ವಹಣೆ/ಅಭಿವೃದ್ಧಿ ಮಾಡಲು ಯೋಜಿಸಲಾಗಿದೆ.

ಇದಲ್ಲದೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–ಹಂತ–X ರಲ್ಲಿನ 1 ರಸ್ತೆ ಕಾಮಗಾರಿ ಮತ್ತು ಯೋಜನೆ–II ರಲ್ಲಿನ 2 ರಸ್ತೆ ಕಾಮಗಾರಿಗಳು ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–I, II ರಲ್ಲಿ ಅನುಕ್ರಮವಾಗಿ 7 ರಸ್ತೆ ಕಾಮಗಾರಿಗಳು ಮತ್ತು 13 ರಸ್ತೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಈ ಎಲ್ಲಾ ರಸ್ತೆಗಳು ನಿರ್ವಹಣಾ ಅವಧಿಯಲ್ಲಿದ್ದು, ಸುಸ್ಥಿತಿಯಲಿರುತ್ತದೆ.

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ– III ರಲ್ಲಿ ಅನುಮೋದನೆಯಾದ 6 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.

ಹಾನಗಲ್ ಜಿಲ್ಲೆಯ ಉಳಿಕೆ ರಸ್ತೆಗಳ ದುರಸ್ತಿ/ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಆದ್ಯತೆ ಮೇರೆಗೆ ಜಿಲ್ಲಾ ಪಂಚಾಯತಿ ವತಿಯಿಂದ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಕೆ. ಪಾಟೀಲ್:– ಸದಸ್ಯರು ಹೇಳುತ್ತಿರುವ ಸಮಸ್ಯೆ ಸರ್ಕಾರಕ್ಕೆ ಗೊತ್ತಿದೆ. ಈ ಸಂದರ್ಭದಲ್ಲಿ ಹಾನಗಲ್ ಜಿಲ್ಲೆಯ ಉಳಿಕೆ ರಸ್ತೆಗಳ ದುರಸ್ತಿ, ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ಜಿಲ್ಲಾ ಪಂಚಾಯಿತಿ ವತಿಯಿಂದ ತೆಗೆದುಕೊಳ್ಳುತ್ತೇವೆ. ಎಂದು ಹೇಳಿದ್ದೇವೆ. ಆದಷ್ಟು ಹೆಚ್ಚಿನ ಅನುದಾನವನ್ನು ಈ ಕೆಲಸಕ್ಕಾಗಿ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

12. ವಿಷಯ: ಚಿಕ್ಕಮಗಳೂರು ತಾಲ್ಲೂಕಿಗೆ 2013–14ನೇ ಸಾಲಿನಲ್ಲಿ ಎಂಟು ಗ್ರಾಮೀಣ ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದರೂ, ಕಾರ್ಯಾರಂಭ ಮಾಡದಿರುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಚಿಕ್ಕಮಗಳೂರು ತಾಲ್ಲೂಕಿಗೆ 2013–14ನೇ ಸಾಲಿನಲ್ಲಿ ಎಂಟು ಗ್ರಾಮೀಣ ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದರೂ, ಕಾರ್ಯಾರಂಭ ಮಾಡದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕಿಗೆ 2013–14ನೇ ಸಾಲಿನಲ್ಲಿ 8 ನೀರು ಶುದ್ಧೀಕರಣ ಘಟಕಗಳು ಮಂಜೂರಾಗಿದ್ದು, ಅವುಗಳನ್ನು M/s. FIVBRO International Pvt. Ltd., Ahmadabad ಸಂಸ್ಥೆಗೆ ಅನುಷ್ಠಾನಗೊಳಿಸಲು ವಹಿಸಿದ್ದು ಈಗಾಗಲೇ ಎಲ್ಲಾ